ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗಾಗಲೇ ಸರ್ಕಾರ ಕ್ರಮ ಕೈಗೊಂಡಿದೆ. ಆದರೆ ಸರ್ಕಾರದ ಕ್ರಮವನ್ನು ಅಧಿಕಾರಿಗಳು ಜಾರಿಗೆ ಮಾಡುತ್ತಾ ಇಲ್ಲ. ಸರ್ಕಾರ ಕ್ರಮ ತೆಗೆದುಕೊಂಡಿದೆ, ಮಂತ್ರಿಗಳು ಬರೆದಿದ್ದಾರೆ, ನೋಡಿ ಬೇಕಾದರೆ ಕೋರ್ಟಿನ ಆಜ್ಞೆ, ಸರ್ಕಾರದ ಆಜ್ಞೆ, ಹಾಗೂ ಮಾನ್ಯ ಗೋವಿಂದೇಗೌಡರು ಬರೆದಿರುವ ಪತ್ರ ಕೂಡ ಎಲ್ಲವೂ ಇಲ್ಲಿ ಇದೆ. ಇದರ ಮೇಲೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎನ್ನುವುದು ನನ್ನ ಪ್ರಶ್ನೆ ಅಲ್ಲ. ಸರ್ಕಾರದ ಕ್ರಮವನ್ನು ನಿಮ್ಮ ಅಧಿಕಾರಿಗಳು ಜಾರಿ ಮಾಡುತ್ತಿಲ್ಲ. ನಿಮ್ಮ ಅಧಿಕಾರಿಗಳು ಸರ್ಕಾರದ ಕ್ರಮವನ್ನು ಜಾರಿಗೆ ಮಾಡುತ್ತಿಲ್ಲ ಎಂದರೆ ಅವರನ್ನು ನೀವು ಏಕೆ ಇಟ್ಟುಕೊಂಡಿದ್ದೀರಿ?

ಛೇರ್ಮನ್: ಈಗ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಅವರು ಹೇಳಿದ್ದಾರೆ. ಈ ಕ್ರಮವನ್ನು ಬಿಟ್ಟು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ತಾವು ಅವಕಾಶ ಮಾಡಿಕೊಡಿ.

ಶ್ರೀ ಎನ್.ರಾಜೇಂದ್ರನ್ (ಕೆ.ಜಿ.ಎಫ್): ಛೇರ್ಮನ್‌ರವರೇ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ

ಛೇರ್ಮನ್: ಜೀರೋ ಅವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ.

1.20 ಪಿ.ಎಂ

(ಎ) ಕುಂದಾಪುರ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಸಮುದ್ರ ಕೊರೆತದಿಂದ ಉಂಟಾಗಿರುವ ಹಾನಿ

+ ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಛೇರ್ಮನ್‌ರವರೆ, ಕುಂದಾಪುರ ಹಾಗೂ ಉಡುಪಿ ತಾಲ್ಲೂಕುಗಳಲ್ಲಿ ಸಮುದ್ರದ ಕೊರತೆಯಿಂದ ಜಾಸ್ತಿ ಹಾನಿಯಾಗುತ್ತಿದೆ. ಈ ಬಗ್ಗೆ ತಾತ್ಕಾಲಿಕ ತಡೆಗಳನ್ನು ಹಾಕುತ್ತಿದ್ದರೂ ಕೂಡ ಅದು ಯಾವುದೂ ಪ್ರಯೋಜನವಾಗುತ್ತಿಲ್ಲ. ಕುಂದಾಪುರದ ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರವಾಗಿ ಹಾದು ಹೋಗಿರುವ ಕರಾವಳಿ ರಸ್ತೆ ಸಮುದ್ರದಿಂದ ಕೊಚ್ಚಿ ಹೋಗತಕ್ಕಂಥ ಒಂದು ಭೀತಿ ಇದೆ. ಹಾಗೂ ಈ ಎರಡು ಸ್ಥಳಗಳಲ್ಲಿ ಸಹ ಎರಡು ಅಲ್ಪಸಂಖ್ಯಾತರ ಮನೆಗಳೂ ಸಹ ಕೊಚ್ಚಿಕೊಂಡು ಹೋಗುವಂತಹ ಪರಿಸ್ಥಿತಿ ಇದೆ. ಇದಕ್ಕೆ ಮುಖ್ಯವಾದ ಸಮಸ್ಯೆ ಏನೆಂದರೆ ತಮ್ಮಲ್ಲಿ ತಾಂತ್ರಿಕ ತರಬೇತಿ ಹೊಂದಿದವರು ಯಾರೂ ಇಲ್ಲ. ಕಲ್ಲು ಹಾಕುತ್ತಾರೆ, ಕೆಲ್ಲು ಸಮುದ್ರದಲ್ಲಿ ಕೊಚ್ಚಿಹೋಗುತ್ತದೆ. ದೊಡ್ಡ ಕಲ್ಲು ಹಾಕಿದರೆ ಅದನ್ನು ಹಾಕುವುದು ಸರಿಯಲ್ಲ ಎನ್ನುತ್ತೀರಿ. ತುರ್ತು ಅವುಗಳನ್ನು ತಡೆ ಒಡ್ಡಬೇಕಾದರೆ ಏನಾದರೂ ಕ್ರಮವನ್ನು ಹಾಕಿಕೊಳ್ಳಬೇಕು, ನಿರಂತರವಾಗಿ ಈ

ಸಮುದ್ರದ ಕೊರತೆ ನಡೆಯುತ್ತಿರುವುದರಿಂದ ಶಾಶ್ವತವಾಗಿ ಒಂದು ತಡೆ ಗೋಡೆಯನ್ನು ಹಾಕಬೇಕಾಗಿದೆ. ಮತ್ತೊಂದು ವಿಚಾರವೆಂದರೆ ಈ ಸಮುದ್ರದ ಬದಿಯಲ್ಲಿ ಸುಣ್ಣದ ಚಿಪ್ಪನ್ನು ಹೆಕ್ಕುತ್ತಿದ್ದಾರೆ. ಇದನ್ನು ಹೆಕ್ಕಬೇಕೇ ಅಥವಾ ಬೇಡವೇ ಎನ್ನುವುದು ನಮಗೆ ವೈಜ್ಞಾನಿಕವಾಗಿ ಗೊತ್ತಿಲ್ಲ. ಆದರೆ ಅಲ್ಲಿಯ ಜನರು ಸಮುದ್ರದ ಬದಿಯಲ್ಲಿರುವ ಸುಣ್ಣದ ಚಿಪ್ಪನ್ನು ತೆಗೆಯುತ್ತಿರುವುದರಿಂದ ಸಮುದ್ರದ ಕೊರತೆ ಉಂಟಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ತಮ್ಮ ಇಲಾಖೆಯಿಂದ ಅಥವಾ ಯಾವುದೇ ಇಲಾಖೆಯಿಂದ ಸುಣ್ಣದ ಚಿಪ್ಪನ್ನು ತೆಗೆದರೆ ಸಮುದ್ರದ ಕೊರತೆ ಬರುತ್ತದೆ ಎನ್ನತಕ್ಕಂಥ ಮಾತನ್ನು ಎಲ್ಲೂ ಹೇಳಿಲ್ಲ. ಆದ್ದರಿಂದ ಈ ಬಗ್ಗೆ ಸುಣ್ಣದ ಚಿಪ್ಪನ್ನು ತೆಗೆದರೆ ಸಮುದ್ರದ ಕೊರತೆ ಬರುತ್ತದೆ ಅಥವಾ ಇಲ್ಲವೆ ಎನ್ನುವುದರ ಬಗ್ಗೆ ವೈಜ್ಞಾನಿಕ ಪರೀಕ್ಷೆ ಮಾಡಬೇಕಾಗುತ್ತದೆ. ಮತ್ತು ಆ ಬಗ್ಗೆ ಎಲ್ಲಿ ರಸ್ತೆಗಳು ಕಡಿದು ಹೋಗುತ್ತವೆ, ಅಥವಾ ಮನೆಗೆ ಹಾನಿ ಉಂಟಾಗುತ್ತಿದೆ ಅಲ್ಲಿ ವಿಶೇಷವಾಗಿ, ತುರ್ತಾಗಿ ಕ್ರಮಗಳನ್ನು ಕೈಗೊಳ್ಳಬೇಕು. ಹಾಗೂ ತಮ್ಮ ಪರಿಣತರಿಂದ.. ಉದಾಹರಣೆಗೆ ಎಂಬಿಬಿಎಸ್ ವೈದ್ಯರು ಎಲ್ಲಾ ಕಾಯಿಲೆಗೆ ಔಷಧಿ ಕೊಡುವ ರೀತಿಯಲ್ಲಿ ತಮ್ಮ ಇಂಜೀನಿಯರು ಎಲ್ಲದಕ್ಕೂ ಪರಿಹಾರ ಕೊಡಬೇಕು. ಆದರೆ ಈ ಸಮುದ್ರ ಕೊರತೆಯನ್ನು ಶಾಶ್ವತವಾಗಿ ಅಥವಾ ತುರ್ತಾಗಿ ತಡೆಹಿಡಿಯತಕ್ಕಂಥ ಯಾವುದೇ ವ್ಯವಸ್ಥೆಗಳು ತಮ್ಮ ಇಲಾಖೆಯಲ್ಲಿ ಇಲ್ಲ ಎನ್ನತಕ್ಕಂಥ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

(ಗೊಂದಲ)

ಛೇರ್ಮನ್: ಶೂನ್ಯವೇಳೆಯಲ್ಲಿ ಯಾರು ಹೆಸರುಗಳನ್ನು ಕೊಟ್ಟಿರುತ್ತಾರೋ ಅವರು ಮಾತನಾಡಬೇಕಾಗುತ್ತದೆ, ಬೇರೆಯವರು ಮಾತನಾಡುವುದಕ್ಕಾಗುವುದಿಲ್ಲ. ತಮ್ಮ ಪ್ರಶ್ನೆಗೂ ಕೂಡ ಅವರು ಉತ್ತರ ಕೊಡುತ್ತಾರೆ ಕೊಟ್ಟಿರುವ ಉತ್ತರದ ಬಗ್ಗೆ ಕೇಳದಿದ್ದರೆ ನಂತರ ಕೇಳಬಹುದು.

(9) ವಿಷಯ: ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಸಮುದ್ರದ ಕೊರೆತದಿಂದ ಉಂಟಾಗಿರುವ ಹಾನಿ.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ್): ಮಾನ್ಯ ಛೇರ್ಮನ್‌ರವರೆ, ಇದಕ್ಕೆ ಪೂರಕವಾಗಿ ನನ್ನ ಕ್ಷೇತ್ರದಲ್ಲಿ ಕೂಡ ಸಮುದ್ರದ ಕೊರತೆಯಾಗಿದೆ. ಕೋಟಿಪುರದಲ್ಲಿ ತಾತ್ಕಲಿಕ ತಡೆ ಗೋಡೆಯನ್ನು ಮಾಡಿರತಕ್ಕಂಥದ್ದು ನಿನ್ನೆ ಸಮುದ್ರದ ಕೊರತೆಯಾಗಿ ಪೂರ್ಣ ಕೊಚ್ಚಿ ಹೋಗಿದೆ. ನಾನು ಮಂತ್ರಿಗಳಲ್ಲಿ ಸಹ ವಿನಂತಿ ಮಾಡುತ್ತಿದ್ದೇನೆ, ಇಲ್ಲಿ ಸುಮಾರು 28 ಲಕ್ಷ ರೂ.ಗಳ ಕಾಮಾಗಾರಿಯನ್ನು ಯಾವುದೇ ಟೆಂಡರ್ ಕೂಗದೆ ಮಾಡಿಸಿದ್ದಾರೆ. ಪುನಃ ಹೀಗಾಗದಿರಲು ಶಾಶ್ವತವಾದ ಒಂದು ತಡೆ ಗೋಡೆಯನ್ನು ಹಮ್ಮಿಕೊಳ್ಳಬೇಕೆಂದು ಕೇಳುತ್ತೇನೆ. ದಯಮಾಡಿ ಮಾನ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಉಳ್ಳಾಲ್ ಕೋಟಿ ಪುರದಲ್ಲಿ ತಕ್ಷಣ ಶಾಶ್ವತವಾದ ತಡೆ